ಕರ್ನಾಟಕ ಸರ್ಕಾರ                                                                                     ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 2123/2024 CW-1 PW- 3

| | |
|---|---|
| ಹೆಸರು | ಮಮತಾ ಎಸ್.ಬಿ. |
| ಗಂಡನ ಹೆಸರು | ಧನರಾಜ್ |
| ವಯಸ್ಸು | 38 ವರ್ಷ |
| ಉದ್ಯೋಗ | ಅಬಕಾರಿ ನಿರೀಕ್ಷಕರು |
| ವಾಸ ಸ್ಥಳ | ಹಗರಿಬೊಮ್ಮನಹಳ್ಳಿ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ02-06-2026

ಮುಖ್ಯ ವಿಚಾರಣೆಃ ಸ_ಸ_ಅ_ಅವರಿಂದ

ನಾನು ದಿನಾಂಕ: 05-02-2024 ರಿಂದ 10-06-2024 ರವರೆಗೆ ಸಿಂಧನೂರು ಅಬಕಾರಿ ಪೋಲೀಸ್ ಠಾಣೆಯಲ್ಲಿ ಅಬಕಾರಿ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 16-03-2024 ರಂದು ಲೋಕ ಸಭಾ ಚುನಾವಣೆ ನೀತಿ ಸಂಹಿತೆ ಜಾರಿ ಇದ್ದ ನಿಮಿತ್ಯ ಗಸ್ತು ಕರ್ತವ್ಯ ನಿರ್ವಹಿಸುತ್ತಾ ಧಡೇಸುಗೂರು ಗ್ರಾಮದಲ್ಲಿರುವಾಗ ರಾತ್ರಿ 8-40 ರ ಸುಮಾರಿಗೆ ಬಂದ ಮಾಹಿತಿ ಮೇರೆಗೆ ಕೆಂಗಲ್ ಕ್ರಾಸ್ ಬಳಿ ಇದ್ದ ಚಾ.ಸಾ. 2 ಮತ್ತು 3 ರಿಗೆ ಬಾತ್ಮಿ ವಿಚಾರ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ಅವರನ್ನು ನಮ್ಮ ಸರ್ಕಾರಿ ವಾಹನ ಸಂ. ಕೆ.ಎ. 36 ಜಿ 0690 ನೇದ್ದರಲ್ಲಿ ಕರೆದುಕೊಂಡು ಗಸ್ತು ಕರ್ತವ್ಯ ನಿರ್ವಹಿಸುತ್ತಿರುವಾಗ ಧಡೇಸುಗೂರು ಗ್ರಾಮದ ಕಡೆಯಿಂದ ತ್ರಿಚಕ್ರವಾಹನ ಬರುತ್ತಿರುವುದನ್ನು ನೋಡಿ ನಾನು ಅದನ್ನು ಕೈಸನ್ನೆ ಮಾಡಿ ನಿಲ್ಲಿಸಿ ಅದರ ವಾಹನ ಚಾಲಕನನ್ನು ವಿಚಾರಿಸಲಾಗಿ ಆತ ತನ್ನ ಹೆಸರು ಶರಣಬಸವ ತಂ. ಶ್ಯಾಮಣ್ಣ ಎಂದು ತಿಳಿಸಿದ. ನಂತರ ನಾನು ಶೋಧನಾ ಸಮುಚ್ಛಿತ ವರದಿ ತಯಾರಿಸಿ ಪಂಚರ ಸಮಕ್ಷಮ ಸಿಬ್ಬಂದಿಯವರ ಸಹಾಯದಿಂದ ಆರೋಪಿತನ ವಾಹನವನ್ನು ಪರೀಕ್ಷಿಸಲಾಗಿ ಅದರಲ್ಲಿ 90 ಎಂ.ಎಲ್. ಅಳತೆಯ ಓ.ಸಿ. ವಿಸ್ಕಿಯ 8 ಬಾಕ್ಸ್‌ಗಳು ಪ್ರತಿ ಪೆಟ್ಟಿಗೆಯಲ್ಲಿ 96 ಟೆಟ್ರಾಪಾಕೇಟ್‌ಗಳಿದ್ದವು, ಹೆಚ್.ವಿ. ಚಿಯರ್ಸ್ ವಿಸ್ಕಿಯ ಒಂದು ಪೆಟ್ಟಿಗೆ ಅದರಲ್ಲಿ 96 ಮದ್ಯದ ಟೆಟ್ರಾ ಪಾಕೇಟ್‌ಗಳು, ಬಿ.ಪಿ. ವಿಸ್ಕಿಯ ಒಂದುಪೆಟ್ಟಿಗೆ ಅದರಲ್ಲಿ 48

ಮದ್ಯದ ಟೆಟ್ರಾಪಾಕೇಟ್‌ಗಳಿದ್ದವು, ಪವರ್‌ಫುಲ್ ಬಿಯರ್‌ನ 3 ಪೆಟ್ಟಿಗೆಗಳು ಅದರಲ್ಲಿ 650 ಎಂ.ಎಲ್. 36 ಬಾಟಲಿಗಳಿದ್ದವು, ಕೆ.ಎಫ್. ಸ್ಟ್ರಾಂಗ್ ಬಿಯರ್‌ನ 2 ಪೆಟ್ಟಿಗೆಗಳು ಅದರಲ್ಲಿ 650 ಎಂ.ಎಲ್. 12 ಬಾಟಲಿಗಳಿದ್ದು, ಇನ್ನೊಂದು ಕೆ.ಎಫ್. ಸ್ಟ್ರಾಂಗ್ ಬಿಯರ್‌ನ ಟಿನ್‌ಗಳಿದ್ದು, ಅದರಲ್ಲಿ 350 ಎಂ.ಎಲ್. ಅಳತೆ 24 ಟಿನ್‌ಗಳಿದ್ದವು. ಒಟ್ಟು 82.080 ಲೀ ಮದ್ಯ ಮತ್ತು 39.12 ಲೀ ಬಿಯರ್ ಇತ್ತು. ಸದರಿ ಮದ್ಯ ಮಾರಾಟ ಮಾಡಲು ಮತ್ತು ಸಾಗಾಣಿಕೆ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ಸದರಿ ವ್ಯಕ್ತಿ ತಿಳಿಸಿದ ನಂತರ ನಾನು ಪಂಚರ ಸಮಕ್ಷಮ ವಾಹನ ತಪಾಸಣೆ ಮಾಡಲಾಗಿ ಅದು ಕಪ್ಪು ಬಣ್ಣದ ಮಹೇಂದ್ರ ಕಂಪನಿಯ ಅಲ್ಟ್ರಾ ಡಿಲಕ್ಸ್ ಆಟೋ ಆಗಿದ್ದು, ಅದರ ನೊಂದಣಿ ಸಂ. ಕೆ.ಎ. 36 ಬಿ 9705 ಆಗಿತ್ತು.

ನಂತರ ನಾನು ಆರೋಪಿತನಿಗೆ ಅಕ್ರಮ ಮದ್ಯ ಹೊಂದುವುದು ಮತ್ತು ಸಾಗಾಟ ಮಾಡುವುದು ಅಪರಾಧ ಎಂದು ತಿಳಿಸಿ ಸಿಕ್ಕ ಮುದ್ದೆಮಾಲು ಮತ್ತು ವಾಹನವನ್ನು ತಮ್ಮ ವಶಕ್ಕೆ ಪಡೆದು ಅವುಗಳಿಂದ ನಿಯಮಾನುಸಾರ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಪಂಚನಾಮೆಯನ್ನು ರಾತ್ರಿ 9-50 ರಿಂದ 11-00 ರವರೆಗೆ ಜರುಗಿಸಿದೆವು. ಅದೇಕಾಲಕ್ಕೆ ಈಗಾಗಲೇ ಗುರುತಿಸಲ್ಪಟ್ಟಿರುವ ನಿ.ಪಿ. 2 ಮತ್ತು 3 ರಂತೆ List of Articles ಮತ್ತು ಮಾದರಿ ಮುದ್ರೆ ನಮೂನೆ ತಯಾರಿಸಿಕೊಂಡೆನು. ನಂತರ ಆರೋಪಿತನಿಗೆ ದಸ್ತಗಿರಿ ಮಾಡಿ ಕಲಂ 41 ಎ ಅಡಿ ನೋಟೀಸ್‌ನ್ನು ನೀಡಿದೆನು. ನಂತರ ಮುದ್ದೆಮಾಲು ಹಾಗೂ ತ್ರಿಚಕ್ರವಾಹನದ ಸಮೇತ ಠಾಣೆಗೆ ಹಾಜರಾಗಿ ಸರ್ಕಾರದ ತರಪಿ ದೂರನ್ನು ದಾಖಲಿಸಿ, ಪ್ರ.ವ.ವ. ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸ್ವತ್ತಿನ ಪಟ್ಟಿಯನ್ನು ಬರೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಜಪ್ತುಪಡಿಸಿಕೊಂಡ ಮುದ್ದೆಮಾಲನ್ನು ರಾಸಾಯನಿಕ ಪರೀಕ್ಷೆಗೆ ಸಿಬ್ಬಂದಿಯವರ ಮೂಲಕ ಕಳುಹಿಸಿ ವರದಿ ಪಡೆದು ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಚಾ.ಸಾ. 4 ಮತ್ತು 5 ರ ಹೇಳಿಕೆಯನ್ನೂ ಸಹ ದಾಖಲಿಸಿಕೊಂಡಿರುತ್ತೇನೆ.

ಸಾಕ್ಷಿ ಘಟನಾಸ್ಥಳದ ಪಂಚನಾಮೆಯಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 1(ಸಿ) ಎಂದು ಗುರುತಿಸಲಾಯಿತು. ನಿ.ಪಿ. 2 ರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 2(ಸಿ) ಎಂದು, ಆರೋಪಿತನ ಸಹಿಯನ್ನು ನಿ.ಪಿ. 2(ಡಿ) ಎಂದು ಗುರುತಿಸಲಾಯಿತು. ನಿ.ಪಿ. 3 ರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 3(ಸಿ) ಎಂದು ಗುರುತಿಸಲಾಯಿತು. ಶೋಧನಾ ಸಮುಚ್ಚಿತ ವರದಿಯನ್ನು ನಿ.ಪಿ. 4 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ಆರೋಪಿತನಿಗೆ ಕಲಂ 41 (ಎ) ಅಡಿ ನೀಡಿದ ನೋಟೀಸಿನ ಪ್ರತಿಯನ್ನು ನಿ.ಪಿ. 5 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 5(ಎ) ಎಂದು, ಅದರಲ್ಲಿನ ಆರೋಪಿತನ ಸಹಿಯನ್ನು ನಿ.ಪಿ. 5(ಬಿ) ಎಂದು ಗುರುತಿಸಲಾಯಿತು. ದೂರನ್ನು ನಿ.ಪಿ. 6 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು. ಸ್ವತ್ತಿನ ಪಟ್ಟಿಯನ್ನು ನಿ.ಪಿ. 7 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು. ಪ್ರ.ವ.ವ.ಯನ್ನು ನಿ.ಪಿ.

8 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 8(ಎ) ಎಂದು ಗುರುತಿಸಲಾಯಿತು. ಎಫ್.ಎಸ್.ಎಲ್. ರಾಯಚೂರು ಇವರಿಗೆ ಬರೆದ ಪತ್ರವನ್ನು ನಿ.ಪಿ. 9 ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿ.ಪಿ. 9(ಎ) ಎಂದು ಗುರುತಿಸಲಾಯಿತು. ರಾಸಾಯನಿಕ ಪರೀಕ್ಷೆಯ ವರದಿಯನ್ನು ನಿ.ಪಿ. 10 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು, ಹಾಜರುಪಡಿಸಿದ ಮುದ್ದೆಮಾಲನ್ನು ನೋಡಿ ಗುರುತಿಸಿರುತ್ತಾರೆ. ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆಮಾಲಿನ ಮೇಲೆ ಅಂಟಿಸಿದ ಚೀಟಿ ಮೇಲೆ ನನ್ನ ಸಹಿ ಇದೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ. 8 ರಿಗೆ ವಹಿಸಿಕೊಟ್ಟಿರುತ್ತೇನೆ.

ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ.ಎ.ಕೆ. ವಕೀಲರಿಂದ

ನಾವು ಗಸ್ತು ಕರ್ತವ್ಯದಲ್ಲಿದ್ದಾಗ ರಾತ್ರಿ 8-30 ರಿಂದ 8-45 ರ ಸುಮಾರಿಗೆ ಬಾತ್ಮಿ ಬಂದಿರುತ್ತದೆ. ಪಂಚರಿಗೆ ನಮ್ಮ ಸಿಬ್ಬಂದಿಯವರು ಕರೆತಂದಿದ್ದರು. ಅವರಿಗೆ ನೋಟೀಸ್ ನೀಡಿರಲಿಲ್ಲ. ನ್ಯಾಯಾಲಯಕ್ಕೆ ಬಂದು ಪರವಾನಿಗೆ ಪಡೆದುಕೊಂಡು ಹೋಗುವಷ್ಟರಲ್ಲಿ ಸಾಕ್ಷಿ ನಾಶ ಆಗುತ್ತದೆ ಎಂಬ ಉದ್ದೇಶಕ್ಕೆ ಶೋಧನಾ ವಾರೆಂಟ್‌ನ್ನು ನಾನೇ ಬರೆದುಕೊಂಡಿರುತ್ತೇನೆ. ನಾವು ಜಪ್ತುಪಡಿಸಿಕೊಂಡ ಮುದ್ದೆಮಾಲು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲೂ ಸಿಗುತ್ತವೆ ಎಂದರೆ ಸಾಕ್ಷಿ ಅಧೀಕೃತ ಪರವಾನಿಗೆ ಪಡೆದುಕೊಂಡ ಅಂಗಡಿಗಳಲ್ಲಿ ಮಾತ್ರ ಸಿಗುತ್ತವೆ ಎಂದು ನುಡಿಯುತ್ತಾರೆ. ಬಾತ್ಮಿ ಬಂದ ಕಾಲಕ್ಕೆ ರಾತ್ರಿ 8-30 ಆಗಿದ್ದರಿಂದ ಘಟನಾ ಸ್ಥಳದಲ್ಲಿ ಅಷ್ಟೊಂದು ಜನ ಓಡಾಡುತ್ತಿರಲಿಲ್ಲ. ವಾಹನಕ್ಕೂ, ಮುದ್ದೆಮಾಲಿಗೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿ ಮತ್ತು ಪಂಚನಾಮೆ ಜರುಗಿಸದಿದ್ದರೂ ಸಹ ಠಾಣಾ ಅಂಕಿ ಸಂಖ್ಯೆ ಹೆಚ್ಚಿಸಲು ಸುಳ್ಳು ದೂರು ನೀಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ವಿಷಯ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

**ಓ. ಹೇ. ಕೇ. ಸರಿ ಇದೆ,**

**1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,**

**ಸಿಂಧನೂರು.**

ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆ: 2123/2024 CW-8 PW- 4

| | |
|---|---|
| ಹೆಸರು | ಮಲ್ಲವ್ವ ಕೇತನ್ನವರ |
| ಗಂಡನ ಹೆಸರು | ಲಕ್ಷ್ಮೀಕಾಂತ |
| ವಯಸ್ಸು | 36 |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು, ಸಿಂಧನೂರು ವಲಯ. |
| ವಾಸ ಸ್ಥಳ | ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ:02-06-2026

ಮುಖ್ಯ ವಿಚಾರಣೆ: ಸ ಸ ಅ ಅವರಿಂದ

ನಾನು ದಿನಾಂಕ: 10-03-2023 ರಿಂದ ಇಲ್ಲಿಯವರೆಗೆ ಸಿಂಧನೂರು ಅಬಕಾರಿ ಪೋಲೀಸ್ ಠಾಣೆಯಲ್ಲಿ ಅಬಕಾರಿ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 29-05-2024 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ. 1 ರಿಂದ ಪಡೆದು ಪರಿಶೀಲಿಸಿರುತ್ತೇನೆ.

ದಿ: 18-07-2024 ರಂದು ಆರ್.ಟಿ.ಓ. ರಾಯಚೂರು ಇವರಿಗೆ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ತ್ರಿ ಚಕ್ರ ವಾಹನದ ಮಾಲೀಕತ್ವದ ಕುರಿತು ಪತ್ರ ಬರೆದಿರುತ್ತೇನೆ.

ದಿ: 18-07-2024 ರಂದು ಸದರಿಯವರಿಂದ ಸದರಿ ವಾಹನದ B Extract ನ್ನು ಪಡೆದು ಪರಿಶೀಲಿಸಲಾಗಿ ಅದು ಆರೋಪಿತನ ಮಾಲೀಕತ್ವಕ್ಕೆ ಒಳಪಟ್ಟಿರುತ್ತದೆ.

ದಿ: 18-07-2024 ರಂದು ಘಟನಾಸ್ಥಳಕ್ಕೆ ಭೇಟಿ ನೀಡಿ ಚಾ.ಸಾ. 4 ಮತ್ತು 5 ರ ಸಮಕ್ಷಮ ಘಟನಾಸ್ಥಳದ ಪರಿಶೀಲನಾ ವರದಿ ತಯಾರಿಸಿ ಆ ಕಾಲಕ್ಕೆ ಒಂದು ಭಾವಚಿತ್ರ ತೆಗೆದುಕೊಂಡು ಚಾ.ಸಾ. 5 ರವರಿಂದ ಕಲಂ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

ಅದೇ ದಿನ ಆರೋಪಿತನಿಗೆ ಕಲಂ 91 ಸಿ.ಆರ್.ಪಿ.ಸಿ. ಅಡಿ ನೋಟೀಸ್ ಜಾರಿ ಮಾಡಿರುತ್ತೇನೆ. ಅದೇ ದಿನ ಆರೋಪಿತನ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಮತ್ತು ಆತನಿಂದ ಸದರಿ ವಾಹನದ ಆರ್.ಸಿ. ಪುಸ್ತಕದ ಝುರಾಕ್ಸ್ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ಆರೋಪಿ ತನ್ನ ಹೇಳಿಕೆಯಲ್ಲಿ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ

ಮುದ್ದೆಮಾಲನ್ನು ಯಾವುದೇ ಅಧೀಕೃತ ಪರವಾನಿಗೆ ಇಲ್ಲದೇ ತನ್ನ ಲಾಭದ ಉದ್ದೇಶಕ್ಕೆ ಜಪ್ತಾದ ವಾಹನದಲ್ಲಿ ಸಾಗಾಟ ಮಾಡುತ್ತಿದ್ದಾಗಿ ಒಪ್ಪಿಕೊಂಡಿರುತ್ತಾನೆ.

ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಲಭ್ಯವಿದ್ದ ಕಾರಣ ತನಿಖೆ ಪೂರ್ಣಗೊಂಡಿದ್ದರಿಂದ ಆತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ. ಉಳಿದ ಮುದ್ದೆಮಾಲನ್ನು ಮೇಲಾಧಿಕಾರಿಯವರ ಅನುಮತಿ ಪಡೆದು ಕಾನೂನಿನ ಪ್ರಕಾರ ನಾಶಗೊಳಿಸಿರುತ್ತೇನೆ.

ಸಾಕ್ಷಿ ಆರ್.ಟಿ.ಓ. ರಾಯಚೂರು ಇವರಿಗೆ ಬರೆದ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 11 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 11(ಎ) ಎಂದು ಗುರುತಿಸಲಾಯಿತು. ಸದರಿಯವರಿಂದ ಪಡೆದ B extract ನ್ನು ನಿ.ಪಿ. 12 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 12(ಎ) ಎಂದು ಗುರುತಿಸಲಾಯಿತು. ಆರೋಪಿತನಿಗೆ ಕಲಂ 91 ಸಿ.ಆರ್.ಪಿ.ಸಿ. ಅಡಿ ನೀಡಿದ ನೋಟೀಸಿನ ಪ್ರತಿಯನ್ನು ನಿ.ಪಿ. 13 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 13(ಎ) ಎಂದು, ಆರೋಪಿತನ ಸಹಿಯನ್ನು ನಿ.ಪಿ. 13(ಬಿ) ಎಂದು ಗುರುತಿಸಲಾಯಿತು. ಆರೋಪಿತನ ಹೇಳಿಕೆಯನ್ನು ನಿ.ಪಿ. 14 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 14(ಎ) ಎಂದು, ಆರೋಪಿತನ ಸಹಿಯನ್ನು ನಿ.ಪಿ. 14(ಬಿ) ಎಂದು ಗುರುತಿಸಲಾಯಿತು. ಘಟನಾಸ್ಥಳದ ಪರಿಶೀಲನಾ ವರದಿಯನ್ನು ನಿ.ಪಿ. 15 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 15(ಎ) ಎಂದು ಗುರುತಿಸಲಾಯಿತು. ನಿ.ಪಿ. 15 ರ ಕಾಲಕ್ಕೆ ತೆಗೆದರೆನ್ನಲಾದ ಭಾವಚಿತ್ರ ನೋಡಿ ಸಾಕ್ಷಿ ತಾನು ಅದರಲ್ಲಿರುವುದಾಗಿ ಗುರುತಿಸಿದ್ದು, ಅದನ್ನು ನಿ.ಪಿ. 16 ಎಂದು ಗುರುತಿಸಲಾಯಿತು. ಚಾ.ಸಾ. 5 ರಿಂದ ಪಡೆದ ಕಲಂ 65 ಬಿ ಪ್ರಮಾಣ ಪತ್ರವನ್ನು ನಿ.ಪಿ. 17 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 17(ಎ) ಎಂದು, ಚಾ.ಸಾ. 5 ರ ಸಹಿಯನ್ನು ನಿ.ಪಿ. 17(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತನನ್ನು ಮತ್ತು ಮುದ್ದೆಮಾಲನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ.ಎ.ಕೆ. ವಕೀಲರಿಂದ</u>

ಆರ್.ಟಿ.ಓ. ರಾಯಚೂರು ಇವರಿಗೆ ನಾನು ನಮ್ಮ ಸಿಬ್ಬಂದಿಯವರ ಮೂಲಕ ಬರಹದಲ್ಲಿ ಆರೋಪಿತನ ವಾಹನದ ಮಾಹಿತಿ ಕುರಿತು ಪತ್ರ ಬರೆದಿದ್ದೆ. ಯಾವ ಸಿಬ್ಬಂದಿಯವರ ಮೂಲಕ ಎಂದು ಅಂತಿಮವರದಿಯಲ್ಲಿ ನಮೂದಿಸಿಲ್ಲ. ನಿ.ಪಿ. 17 ನ್ನು ಕಾನೂನಿನ ಪ್ರಕಾರ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ. 13 ಕ್ಕೆ ಆರೋಪಿತನ ಸಹಿಯನ್ನು ಠಾಣೆಯಲ್ಲಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ಯಾವುದೇ ತಪ್ಪಿಲ್ಲದಿದ್ದರೂ ಸಹ ಚಾ.ಸಾ. 1 ನಮ್ಮ ಸಿಬ್ಬಂದಿ ಎಂಬ ಕಾರಣಕ್ಕೆ ಅವರ ದೂರಿಗೆ ಅನುಕೂಲ ಆಗಲೀ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗೋಸ್ಕರ ಸುಳ್ಳು ವರದಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,

**ಸಿಂಧನೂರು.**